ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪಿಸಿರತಕ್ಕ ವಿಚಾರವನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದು ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸುತ್ತೇನೆ.

೧೬. ಕಮಲಾಪುರ ಕ್ಷೇತ್ರದಲ್ಲಿ ಅಂಬಲಗಾ ಗ್ರಾಮದ ಹತ್ತಿರ ಇಂಗಕೆರೆ ಒಡೆದು ಹೋಗಿ ರೈತರ ಬೆಳೆ ಹಾನಿಯಾಗಿ ಪರಿಹಾರಕ್ಕೆ ಮನವಿ.

ಶ್ರೀ ಬಿ. ರಾಮಕೃಷ್ಣ.— ಮಾನ್ಯ ಅಧ್ಯಕ್ಷರೇ ಗುಲ್ಬರ್ಗಾ ಜಿಲ್ಲೆಯ ಕಮಲಾಪುರ ವಿಧಾನಸಭಾ ಮಂತ ಕ್ಷೇತ್ರದಲ್ಲಿ ಬರುವ ಅಂಬಲಗಾ ಗ್ರಾಮದ ಹತ್ತಿರ ಸುಮಾರು ೫ ಲಕ್ಷ ರೂಪಾಯಿಗಳ ಖರ್ಚಿನಲ್ಲಿ ಭೂ ಸೇನಾ ನಿಗಮದ ವತಿಯಿಂದ ನಿರ್ಮಿಸಲಾಗುತ್ತಿರುವ ಇಂಗುಕೆರೆ (ಪರ್‌ಕ್ಯುಲೇಷನ್ ಟ್ಯಾಂಕ್) ದಿನಾಂಕ ೧೪-೮-೧೯೮೭ರಂದು ಬಂದ ಭಾರಿ ಮಳೆಯಿಂದಾಗಿ ಸಂಪೂರ್ಣ ತುಂಬಿದ ಕೆರೆ ಒಡೆದುದರಿಂದ ಕೆರೆಯ ಕೆಳಭಾಗದಲ್ಲಿ ಬರುವ ಬಡ ರೈತರ ಬೆಳೆ ಹಾಗೂ ಹೊಲಗಳಲ್ಲಿರುವ ಫಲವತ್ತಾದ ಮಣ್ಣು ಹೆಚ್ಚಿನ ಪ್ರಮಾಣದಲ್ಲಿ ಕೊಚ್ಚಿಕೊಂಡು ಹೋಗಿರುವುದರಿಂದ ಈ ಗ್ರಾಮದ ರೈತರಿಗೆ ಲಕ್ಷಾಂತರ ರೂಪಾಯಿಗಳು ನಷ್ಟವಾಗಿದೆ. ಇದನ್ನು ಕಂಡು ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ನೆರವು ಒದಗಿಸಲು ಕೇಳಿಕೊಂಡ ವಿಷಯವು ಪತ್ರಿಕೆಗಳಲ್ಲಿ ಪ್ರಕಟಗೊಂಡಾಗ ಸಂಬಂಧಪಟ್ಟ ಭೂ ಸೇನಾ ನಿಗಮದವರು ಪರಿಹಾರಧನವನ್ನು ನಿಗಮದ ವತಿಯಿಂದಲೇ ರೈತರಿಗೆ ಕೊಡುತ್ತೇವೆಂದು ಪತ್ರದ ಮುಖಾಂತರ ನನಗೆ ತಿಳಿಸಿರುತ್ತಾರೆ. ಆದರೆ ಕೊಡಬೇಕಾದ ಹಣವನ್ನು ಇಲ್ಲಿಯವರೆಗೆ ಯಾರಿಗೂ ಕೊಟ್ಟಿಲ್ಲ. ಅದಕ್ಕಾಗಿ ನಿಗಮದ ಹೇಳಿಕೆಯಂತೆ ಪ್ರಕಾರ ರೈತರಿಗೆ ತೀವ್ರಗತಿಯಲ್ಲಿ ಪರಿಹಾರ ಧನವನ್ನು ಸರಕಾರ ನಿಗಮದಿಂದ ಯಾವಾಗ ಕೊಡಿಸುವುದು ಎಂದು ತಿಳಿಯಪಡಿಸಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ. ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರವನ್ನು ತರಿಸಿಕೊಡುತ್ತೇನೆ.

೧೭. ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್‌ಗಳಿಗೆ ಕಾರ್ಯದರ್ಶಿಯವರ ನೇಮಕಾತಿಯನ್ನು ಮಾಡದೇ ಇರುವುದು.

ಶ್ರೀ ರಾಮೆನಾಥ ರೈ.—ಮಾನ್ಯ ಅಧ್ಯಕ್ಷರೇ ಸರ್ಕಾರ ಅಧಿಕಾರ ವಿಕೇಂದ್ರೀಕರಣದ ಹೆಸರಿನಲ್ಲಿ ಮಂಡಲ ಪಂಚಾಯತಿ ರಚನೆ ಮಾಡಿ ಅನೇಕ ತಿಂಗಳು ಕಳೆದರೂ ಕೂಡ ಇನ್ನೂ ಕೆಲವು ಮಂಡಲ ಪಂಚಾಯತಿಗಳಲ್ಲಿ ಕಾರ್ಯದರ್ಶಿಯವರ ನೇಮಕ ಆಗಿರುವುದಿಲ್ಲ, ಸಂಬಂಧಪಟ್ಟವರನ್ನೂ ಕೇಳಿದಾಗ ಸರಕಾರ ನಮಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಕೊಟ್ಟಿಲ್ಲ. ನೇಮಕಾತಿಗೆ ಅಭ್ಯರ್ಥಿಗಳನ್ನು ಸರಕಾರವೇ ಕೊಡಬೇಕಾಗಿರುವುದರಿಂದ ಜಿಲ್ಲಾ ಪರಿಷತ್‌ಗೆ ನೇಮಕ ಮಾಡಲು ಸಾಧ್ಯವಾಗಿಲ್ಲ. ಈ ರೀತಿ ಕೆಲವು ಮಂಡಲ್ ಪಂಚಾಯತಿ ಕಾರ್ಯದರ್ಶಿಗಳ ನೇಮಕಕ್ಕೆ ಬಾಕಿ ಇದೆ ಎಂದು ತಿಳಿಸಿರುತ್ತಾರೆ.

ಆದುದರಿಂದ ಈ ಬಗ್ಗೆ ಸರಕಾರ ಕ್ರಮ ಕೈಕೊಂಡು ಉಳಿದಿರುವ ಮಂಡಲ ಪಂಚಾಯತಿಗಳಲ್ಲಿ ಕಾರ್ಯದರ್ಶಿಗಳ ನೇಮಕವನ್ನು ಕೂಡಲೇ ಮಾಡುವಂತೆ, ಮಾನ್ಯ ಗ್ರಾಮೀಣ ಅಭಿವೃದ್ಧಿ ಪಂಚಾಯತ್‌ರಾಜ್, ಸಚಿವರ ಮುಖಾಂತರ ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಗ್ರಾಮೀಣ ಮತ್ತು ಪಂಚಾಯತ್‌ರಾಜ್ ಸಚಿವರ ಪರವಾಗಿ).—

ರಾಜ್ಯದಲ್ಲಿ ಪ್ರಸಕ್ತ ೨೪೯ ಮಂಡಲ ಪಂಚಾಯತ್‌ಗಳು ಇರುತ್ತವೆ. ಅವುಗಳಲ್ಲಿ ಈಗಾಗಲೇ ೨೪೨ ಮಂಡಲ ಪಂಚಾಯತಿಗಳಿಗೆ ಕಾರ್ಯದರ್ಶಿಗಳನ್ನು ನೇಮಕಾತಿ ಮಾಡಲಾಗಿದೆ. ಉಳಿದ ೪೦ ಮಂಡಲ ಪಂಚಾಯತಿ ಕಾರ್ಯದರ್ಶಿಗಳನ್ನು ನೇಮಕ ಮಾಡಲು ಕ್ರಮವನ್ನು ಕೈಗೊಳ್ಳಲಾಗುತ್ತಿದೆ. ಈ ೪೦ ಮಂಡಲ ಪಂಚಾಯತಿಗಳ ಹುದ್ದೆಗಳಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಈಗಾಗಲೇ ಮುಖ್ಯ ಕಾರ್ಯದರ್ಶಿ, ಜಿಲ್ಲಾ ಪರಿಷತ್‌ರವರು ೧೭ ಮಂಡಲ ಪಂಚಾಯತಿಗಳಿಗೆ ನೇಮಕ ಮಾಡಿರು